**ಸಾಕ್ಷಿಯನ್ನು ದಿಃ12.11.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u>**

1. ವಾದಿ ನಿರ್ಮಲಾ ರವರು ನನಗೆ ಗೊತ್ತು.

2. ವಾದಿ ವಾಸವಿರುವ ಮನೆಗೆ ನೀವು ಹೋಗಿ ತೊಂದರೆ ನೀಡಿದ್ದೀರಾ ಎಂದರೆ ಸರಿಯಲ್ಲ. ಅವರೇ ನಮಗೆ ತೊಂದರೆ ಕೊಡುತ್ತಿದ್ದಾರೆ.

3. ನೀವು ತೊಂದರೆ ಕೊಟ್ಟಿದ್ದಕ್ಕೆ ನಿಮ್ಮ ಮೇಲೆ ಕ್ರಿಮಿನಲ್ ಪ್ರಕರಣ ಆಗಿತ್ತು ಎಂದರೆ, ಇಲ್ಲ ನಾವೇ ದೂರು ನೀಡಿದ್ದೆವು ಎಂದು ನುಡಿಯುತ್ತಾರೆ.

4. ಸ್ವತ್ತಿನ ನಂ.217 ಪೂರ್ವ ಪಶ್ಚಿಮ 40 ಅಡಿ ಹಾಗೂ ದಕ್ಷಿಣ ಉತ್ತರ 40 ಅಡಿ ಕಲ್ಲಾರ್ ಶೀಟ್ ಮನೆಯಲ್ಲಿ ವಾದಿಯ ಹೆಸರಿನಲ್ಲಿದ್ದು ಅವರು ವಾಸವಿದ್ದಾರೆ ಎಂದರೆ ಸರಿಯಲ್ಲ.

5. ಪೂರ್ವಕ್ಕೆಃ ರಸ್ತೆ ಮತ್ತು ನಂಜುನಡರವರ ಜಮೀನು, ಪಶ್ಚಿಮಕ್ಕೆ ಸ.ನಂ.61/13 ಪಿ4, ಉತ್ತರಕ್ಕೆಃ ಸ.ನಂ.61/ಪಿ13 ಪಿ4 ಹಾಗೂ ದಕ್ಷಿಣಕ್ಕೆ ಸರ್ಕಾರಿ ರಸ್ತೆ, ಸದರಿ ಸ್ವತ್ತಿನ ಮೇಲೆ ನಿಮಗೆ ಹಕ್ಕು ಇದೆಯಾ ಎಂದರೆ, ಅವರು ನಮ್ಮ ಮನೆಯ ಚಕ್ಕುಬಂದಿ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ.

6. ಸದರಿ ಸ್ವತ್ತು ನಿಮ್ಮದು ಎಂದು ತೋರಿಸಲು ದಾಖಲೆ ಇದೆಯಾ ಎಂದರೆ, ದಾಖಲೆ ಮಾಡಿಸಿಲ್ಲ. ಜಮೀನಿನಲ್ಲಿ ಕೆಲಸ ಮಾಡಲು ಮನೆ ಮಾಡಿಕೊಂಡಿದ್ದೇವೆ ಎಂದು ನುಡಿಯುತ್ತಾರೆ.

7. ಸದರಿ ಮನೆಯಲ್ಲಿ ನೀವು ಸ್ವಾಧೀನದಲ್ಲಿ ಇಲ್ಲ ವಾದಿ ಸ್ವಾಧೀನದಲ್ಲಿ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

8. ವಾದಿ ಸ್ವಾಧೀನದಲ್ಲಿ ಇರುವ ಬಗ್ಗೆ ತೋರಿಸಲು ಅವರ ಹೆಸರಿನಲ್ಲಿ ಡಿಮ್ಯಾಂಡ್, ವಿದ್ಯುತ್ ಬಿಲ್ ಹಾಗೂ ಪಂಚಾಯ ಪರವಾನಿಗೆ ಇದೆ ಎಂದರೆ, ಸುಳ್ಳು ದಾಖಲೆಗಳು ಎಂದು ನುಡಿಯುತ್ತಾರೆ.

9. ಕಲ್ಲಾರ್ ಶೀಟ್ ಮನೆ ನಮ್ಮದು ಎಂದು ತೋರಿಸಲು ದಾಖಲೆ ಇಲ್ಲ. ಜೋಳ ಇಡಲು ಮನೆ ಮಾಡಿಕೊಂಡಿದ್ದೇವೆ.

10. ಪುಟ್ಟರಾಜಪ್ಪ ಯಾರು ಎಂದು ನನಗೆ ಗೊತ್ತಿಲ್ಲ.

ಕರಿಯಪ್ಪ ನನ್ನ ತಂದೆ. ನಿಮ್ಮ ತಂದೆಯವರು ವಾದಿಯ ಮಾವನಿಗೆ ದಿಃ 19.11.2004 ರಲ್ಲಿ ಸ.ನಂ.61/13 ಪಿ4 ನ್ನು ಕ್ರಯದ ಕರಾರು ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಚಾರ ಸ.ನಂ.61/13 ಪಿ4 ರ 2018-19 ರ ಸಾಲಿನ ಪಹಣಿಯ ಕಾಲಂ ನಂ.13 ರಲ್ಲಿ ನಮೂದು ಇದೆ ಎಂದರೆ, ಅದನ್ನು ರದ್ದುಪಡಿಸಲು ಕೇಸ್ ಮಾಡಿದ್ದೇವೆ ಎಂದು ನುಡಿಯುತ್ತಾರೆ.

11. ಅದೇ ದಿನ ನಿಮ್ಮ ತಂದೆ ವಾದಿಯ ಮಾವ ಪುಟ್ಟರಾಜಪ್ಪನವರಿಗೆ ಸ್ವಾಧೀನ ಒಪ್ಪಂದ ಪತ್ರವನ್ನು ಸಹ ಬರೆದುಕೊಟ್ಟಿದ್ದಾರೆ ಎಂದರೆ ಸುಳ್ಳು. ದಿಃ 19.11.2004 ರಿಂದ ಇವತ್ತಿನವರೆಗೆ ದಾವಾ ಸ್ವತ್ತಿನಲ್ಲಿ ವಾದಿಗಳೇ ಸ್ವಾಧೀನದಲ್ಲಿದ್ದಾರೆ ಎಂದರೆ, ಸುಳ್ಳು ನಾವೇ ಇದ್ದೇವೆ ಎಂದು ನುಡಿಯುತ್ತಾರೆ.

12. ವಾದಿಯು ಈಗಲೂ ಸಹ ಅದೇ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನ ಮೇಲೆ ನಿಮಗೆ ಯಾವುದೇ ಹಕ್ಕು ಮತ್ತು ಸ್ವಾಧೀನ ಇಲ್ಲದಿದ್ದರೂ ವಾದಿಗೆ ತೊಂದರೆ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ.

13. ದಾವಾ ಸ್ವತ್ತಿನ ಮೇಲೆ ನಿಮಗೆ ಯಾವುದೇ ಹಕ್ಕು ಇಲ್ಲದಿದ್ದರೂ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ